M.G.V.C. Arts, Commerce & Science College MUDDEBIHAL -586212 Dt: Vijayapur.

International Journal of Kannada Research
www.kannadajournal.com

ISSN: 2454–5813
IJKR 2020; 6(2): 70-73
© 2020 IJKR
www.kannadajournal.com
Received: 04-02-2020
Accepted: 06-03-2020

ಪ್ರೊ. ವಿ.ಎಸ್.ಲಮಾಣಿ
ಸಹಾಯಕ ಪ್ರಾಧ್ಯಾಪಕರು
ಕನ್ನಡ ವಿಭಾಗ ಎಂ.ಜಿ.ವ್ಹಿ.ಸಿ,
ಕಲಾ, ವಾಣಿಜ್ಯ ಹಾಗೂ ವಿಜ್ಞಾನ
ಮಹಾವಿದ್ಯಾಲಯ ಮುದ್ದೇಬಿಹಾಳ

Corresponding Author:
ಪ್ರೊ. ವಿ.ಎಸ್.ಲಮಾಣಿ
ಸಹಾಯಕ ಪ್ರಾಧ್ಯಾಪಕರು
ಕನ್ನಡ ವಿಭಾಗ ಎಂ.ಜಿ.ವ್ಹಿ.ಸಿ,
ಕಲಾ, ವಾಣಿಜ್ಯ ಹಾಗೂ ವಿಜ್ಞಾನ
ಮಹಾವಿದ್ಯಾಲಯ ಮುದ್ದೇಬಿಹಾಳ

# ಪ್ರಸ್ತುತ ಜನಜೀವನದಲ್ಲಿ ಶರಣರ ಚಿಂತನೆಯ ವಾಸ್ತವಿಕತೆ

ಪ್ರೊ. ವಿ.ಎಸ್.ಲಮಾಣಿ

## ಪ್ರಸ್ತಾವನೆ

ಪ್ರಪಂಚ ಕಂಡ ಅಪರೂಪದ ಸಾಹಿತ್ಯಗಳಲ್ಲಿ ಕನ್ನಡ ಸಾಹಿತ್ಯವೂ ಒಂದು ಎಂಬುದು ಅದರ ವಿಶೇಷ. ಕನ್ನಡ ಸಾಹಿತ್ಯವು ಹಲವು ಘಟ್ಟಗಳಲ್ಲಿ ತನ್ನ ಜೀವಂತಿಕೆಯನ್ನು ಸಾಕ್ಷಿಕರಿಸುತ್ತಾ ಬಂದಿದೆ. ಆ ಘಟ್ಟಗಳಲ್ಲಿನ ಒಂದು ಪ್ರಮುಖ ಘಟ್ಟವೇ ವಚನ ಸಾಹಿತ್ಯ ಅಥವಾ ವಚನ ಚಳುವಳಿ. ವಚನ ಸಾಹಿತ್ಯ ತನ್ನ ಅಸ್ತಿತ್ವವನ್ನು ಕಂಡುಕೊಂಡಿದ್ದು ಹನ್ನೆರಡನೆಯ ಶತಮಾನದಲ್ಲಿ ಅದು ಬಸವಾದಿ ಪ್ರಮಥರ ನೇತೃತ್ವದಲ್ಲಿ ಅದುವರೆಗೂ ಕನ್ನಡ ಸಾಹಿತ್ಯ ಬೆಳೆದು ಬಂದದ್ದು ರಾಜಾಶ್ರಯದಲ್ಲಿ. ಆದರೆ ರಾಜಾಶ್ರಯದ ಹಂಗನ್ನೆ ತೊರೆದು ಜನಸಾಮಾನ್ಯರಿಂದ ಜನಸಾಮಾನ್ಯರಿಗಾಗಿ ಜನಸಾಮಾನ್ಯರ ಮಧ್ಯೆ ಬೆಳೆದ ಸಾಹಿತ್ಯವೇ ವಚನ ಸಾಹಿತ್ಯ ಎಂಬುದು ಅದರ ಹೆಗ್ಗಳಿಕೆ. ವಚನ ಸಾಹಿತ್ಯದ ಉದಯದವರೆಗೂ ಸಂಸ್ಕೃತ ಭೂಯಿಷ್ಠವಾದ ಹಳಗನ್ನಡದ ಚಂಪೂವಿನಲ್ಲಿ ಪಂಡಿತರಿಗೆ ತಲುಪುವ ಬರವಣಿಗೆ ಅಂದಿನ ಬರಹಗಾರರದಾಗಿತ್ತು.

ವಚನ ಎಂದರೆ ಮಾತು, ಮಾತನಾಡುವುದು, ವ್ಯಕ್ತಪಡಿಸುವುದು, ಆಣೆ, ಪ್ರಮಾಣ ಇತ್ಯಾದಿ ಅರ್ಥಗಳನ್ನು ಕೊಡುತ್ತದೆ. ಬಸವಣ್ಣನವರ ಒಂದು ವಚನ "ಮೃದುವಚನವೇ ಸಕಲ ಜಪಂಗಳಯ್ಯಾ" ಎಂಬಲ್ಲಿ ವಚನವನ್ನು ಸ್ಪಷ್ಟೀಕರಿಸುತ್ತದೆ. ತೀ.ನಂ.ಶ್ರೀಕಂಠಯ್ಯನವರು ಹೇಳುವಂತೆ 'ವಚನಗಳು ಪದ್ಯದಷ್ಟು ಬಿಗಿಯಲ್ಲ. ಸಾಮಾನ್ಯ ಗದ್ಯದಷ್ಟು ಸಡಿಲವೂ ಅಲ್ಲ. ಸೂಕ್ಷ್ಮವಾಗಿ ವಿಚಾರಿಸಿದರೆ ವಚನಗಳು ಗದ್ಯ ಪದ್ಯದ ನಡುವಿನ ಮಾದರಿ' ಎಂದೇ ಹೇಳಬಹುದು. ವಚನ ಸಾಹಿತ್ಯವು ಪ್ರಮುಖವಾಗಿ ವಚನಗಳ ರಚನೆಯಿಂದ ಬೆಳಕಿಗೆ ಬಂದಿತು. ಶರಣರ ವಚನಗಳು ಓದುವುದಕ್ಕೆ ಹೋದರೆ ಓದುಗಬ್ಬವಾಗಿಯೂ, ಹಾಡುವುದಕ್ಕೆ ಹೋದರೆ ಹಾಡುಗಬ್ಬವಾಗಿಯೂ ಕಂಡುಬರುತ್ತವೆ. ಜನಸಾಮಾನ್ಯರಿಂದ ರಚನೆಯಾದ ವಚನಗಳ ಭಾಷೆ ಸಹಜವಾಗಿಯೆ ಸರಳ ಹಾಗೂ ಕೇಳಲು ಮಧುರವಾಗಿವೆ. ಹೀಗಾಗಿ ವಚನ ಸಾಹಿತ್ಯ ಬಹುಬೇಗ ಅಂದಿನ ಸಮಾಜದಲ್ಲಿ ಜನರನ್ನು ತಲುಪಿತು.

## ಶರಣರ ವಿಚಾರಗಳ ಪರಾಮರ್ಶೆ

ವಚನ ಸಾಹಿತ್ಯದ ಪರಂಪರೆಯೆಂದರೆ ಶರಣರ ಸಾಧನೆ, ಚರಿತ್ರೆಯೆ ಆಗಿದೆ. ಹಾಗಾಗಿ ಶರಣರ ಸಾಧನೆಯನ್ನು ಅವಲೋಕನ ಮಾಡುವುದು ಅವಶ್ಯಕ. ಜನಸಾಮಾನ್ಯರಿಂದ ಪ್ರಾರಂಭವಾದ ವಚನ ಸಾಹಿತ್ಯದ ಆರಂಭಿಕನಾಗಿ ಕಂಡುಬರುವ ಶರಣನೆಂದರೆ ಜೇಡರ ದಾಸಿಮಯ್ಯ. ಈತನ ಕಾಲಮಾನ ಸು. 1135–40. ಈತ ಇದದ್ದು ಚಾಲುಕ್ಯರ ಇಮ್ಮಡಿ ಜಗದೇಕಮಲ್ಲ (1139–49)ನ ಆಸ್ಥಾನದಲ್ಲಿ. ಯಾದಗಿರಿ ಜಿಲ್ಲೆಯ ಮುದನೂರು ಜೇಡರ ದಾಸಿಮಯ್ಯನ ಹುಟ್ಟೂರು. ಬಟ್ಟೆ ನೇಯುವ ಕಾಯಕದ ದಾಸಿಮಯ್ಯ ಮುದನೂರಿನ ದೈವವಾದ ರಾಮನಾಥನ ಭಕ್ತನಾಗಿದ್ದರಿಂದ ಆ ದೇವರ ಹೆಸರನ್ನೆ ತನ್ನ ವಚನಗಳ ಅಂಕಿತನಾಮವನ್ನಾಗಿ ಮಾಡಿಕೊಂಡಿದ್ದಾನೆ. ಶಿವಭಕ್ತನಾದ ಈತ ಸನ್ಯಾಸಿ ಆಗಲು ಒಲ್ಲದೆ ತನ್ನ ಮನೋಭಾವಕ್ಕೆ ಹೊಂದುವ ಹೆಣ್ಣು ದುಗ್ಗಳೆಯನ್ನು ಮದುವೆಯಾಗುತ್ತನೆ. ಗಂಡನನ್ನು ಅನುಸರಿಸಿ ಬಾಳುವ ಹೆಣ್ಣು ಮಡದಿಯಾಗಿ ದೊರೆತರೆ ಸಂಸಾರ ಉತ್ತಮವಾಗಿರುತ್ತದೆಂದು 'ಸತಿಪತಿಗಳೊಂದಾದ ಭಕ್ತಿ ಹಿತವಾಗಿಪ್ಪುದು ಶಿವಂಗೆ' ಎಂದು ಹೇಳುತ್ತ ತನ್ನ ಸಂಸಾರಿಕ ತೃಪ್ತಿಯನ್ನು ವ್ಯಕ್ತಪಡಿಸುತ್ತಾನೆ.

ನಿಸ್ಸಂಶಯವಾಗಿ ನಮಗೆ ತಿಳಿದ ಮಟ್ಟಿಗೆ ಜೇಡರ ದಾಸಿಮಯ್ಯನೆ ಆದ್ಯ ವಚನಕಾರ. ಹಸ್ತಪ್ರತಿಗಳಲ್ಲಿ ಲಭಿಸುವ ಈತನ ವಚನಗಳು ಅಚ್ಚ ತ್ರಪದಿ, ಚೌಪದಿಗಳನ್ನು ಹೋಲುತ್ತದೆ.



Co-ordinator,
Internal Quality Assurance Cell
M.G.V.C. Arts, Commerce & Science College

PRINCIPAL,
M.G.V.C. Arts, Com. & Science College
MUDDEBIHAL - 586212

ದಾಸಿಮಯ್ಯನ ವಚನಗಳು ಗಾತ್ರದಲ್ಲಿ ಚಿಕ್ಕವು, ಭಾಷೆಯೋ ತೀರ ಸರಳ ಇದು ಈತನ ವಚನಗಳ ಶ್ರೇಷ್ಠತೆಗೆ ಕಾರಣವಾಗಿದೆ.

ಒಡಲುಗೊಂಡವ ಹಸಿವ
ಒಡಲುಗೊಂಡವ ಹುಸಿವ
ಒಡಲುಗೊಂಡವನೆಂದು ನೀನೊಮ್ಮೆ ಜಡಿದು ನುಡಿಯದಿರಾ
ನೀನೆನ್ನಂತೊಮ್ಮೆ ಒಡಲುಗೊಂಡು ನೋಡಾ ರಾಮನಾಥ

ಜೇಡರ ದಾಸಿಮಯ್ಯನ ಒಟ್ಟು 176 ವಚನಗಳು ಈವರೆಗೆ ಲಭ್ಯವಾಗಿವೆ. ಮಡದಿ ದುಗ್ಗಳೆ ಕೂಡಾ ವಚನಕಾರ್ತಿಯೆಂಬುದು ತಿಳಿದು ಬರುತ್ತದೆ. ಡಾಂಭಿಕ ಭಕ್ತನ ಭಕ್ತಿಯನ್ನು ದಾಸಿಮಯ್ಯನಲ್ಲಿ ಹರಿತವಾದ ವಿಡಂಬನೆಯನ್ನು ಕಾಣುತ್ತೇವೆ. ಮಠದ ಬೆಕ್ಕಿನ ಸಾಮ್ಯವನ್ನು ಕೊಟ್ಟಿರುವುದು ತುಂಬಾ ಔಚಿತ್ಯಪೂರ್ಣವಾಗಿದೆ. ಇಂದಿಗೂ ಕೂಡ ದೇವರ ಹೆಸರಿನಲ್ಲಿ ಜನಸಾಮಾನ್ಯರು ಮೋಸಹೋಗುವುದನ್ನು ಕಾಣುತ್ತಿದ್ದೇವೆ.

ಬರುಸಟೆಗನ ಭಕ್ತಿ ದಿಟವೆಂದು ನಚ್ಚಲು ಬೇಡ
ಮಠದೊಳಗನ ಬೆಕ್ಕು ಇಲಿಯ ಕಂಡು
ಪುಟನೆಗೆದಂತಾಯಿತು ಕಾಣಾ ರಾಮನಾಥ

ಹೀಗೆ ದಾಸಿಮಯ್ಯ ಓದುಗರ ನೆನಪಿನಲ್ಲಿ ಸದಾ ಸ್ಮರಣೀಯ ವಚನಕಾರರಾಗಿ ಕಂಡುಬರುತ್ತಾರೆ.

ಜಗತ್ತು ಕಂಡ ಮೊದಲ ಚಿಂತಕ. ಮಹಾನ್ ಮಾನವತಾವಾದಿ ಬಸವಣ್ಣನವರು ವಚನ ಚಳುವಳಿಯ ನೇತಾರರಾಗಿ ಕಂಡು ಬರುತ್ತಾರೆ. ಬಸವಣ್ಣನವರು ಬಾಗೇವಾಡಿ ಅಗ್ರಹಾರದಲ್ಲಿ ಮಾದರಸ ಮತ್ತು ಮಾದಲಾಂಬಿಕೆ ದಂಪತಿಗಳ ಉದರದಲ್ಲಿ ಕ್ರಿ.ಶ. 1132 ರಲ್ಲಿ ಹುಟ್ಟಿದರು. ಬೆಳೆಯುವ ಸಿರಿ ಮೊಳಕೆಯಲ್ಲಿ ಕಾಣುವಂತೆ ಬಸವಣ್ಣನವರು ತಮ್ಮ ಬಾಲ್ಯದಲ್ಲಿಯೇ ಅಂದಿನ ಸಮಾಜದಲ್ಲಿ ನೆಲೆಸಿದ್ದ ಅಮಾನವೀಯ ಪದ್ಧತಿಗಳನ್ನು, ಮೇಲು-ಕೀಳು, ಜಾತಿಬೇಧ, ಮತಾಂಧತೆ, ಅಸ್ಪೃಶ್ಯತೆ, ಲಿಂಗತಾರತಮ್ಯ ಇವುಗಳ ವಿರುದ್ಧ ಸಿಡಿದೆದ್ದರು. ಅಷ್ಟೇ ಅಲ್ಲದೆ ನಮ್ಮ ಒಡನಾಟ ಮಾನವಕುಲ ಕೋಟಿಯ ಒಳಿತನ್ನೇ ಬಯಸುವ ಬುದ್ಧಿಜೀವಿಗಳ ಜೊತೆ ಎಂದು ಹೇಳುವ ಬಸವಣ್ಣ

ಸಾರ ಸಜ್ಜನರ ಸಂಗವ ಮಾಡುವುದು
ದೂರ ದುರ್ಜನರ ಸಂಗ ಬೇಡವಯ್ಯಾ
ಆವ ಹಾವಾದಡೇನು, ವಿಷವೊಂದೆ
ಅಂತವರ ಶುದ್ಧವಿಲ್ಲದವರ ಸಂಗ
ಸಿಂಗಿ ಕಾಳಕೂಟ ವಿಷವೊ ಕೂಡಲಸಂಗಮದೇವಾ

ಅವಗುಣವೆಂಬ ಅನಿಷ್ಟವನ್ನು ಹೊಂದಿರುವವರಿಂದ ದೂರವಿದ್ದು, ಸಜ್ಜನಿಕೆಯನ್ನು ಮೈಗೂಡಿಸಿಕೊಂಡಿರುವ ಸಜ್ಜನರ ಸಂಗವ ಮಾಡುವುದು ಮೇಲು ಎಂದು ಹೇಳುತ್ತಾರೆ. ಆವ ಹಾವಾದಡೇನು ವಿಷವೊಂದೆ, ಅಂಥವರ ಸಂಗಬೇಡ ಎಂದು ಸಂಗಮನಾಥನಲ್ಲಿ ಬೇಡುವ ಬಸವಣ್ಣ ಅಂತರಂಗ ಶುದ್ಧವಿಲ್ಲದವರ ಸಹವಾಸವೆಂದರೆ ಕರಾಳವಿಷದ ಸಹವಾಸವೆಂದೇ ಭಾವಿಸುತ್ತಾರೆ.

ಸುಮಾರು 1426 ವಚನಗಳ ಒಡೆಯರಾಗಿರುವ ಬಸವಣ್ಣನವರು ನಡೆ-ನುಡಿ ಒಂದಾಗಿ ತುಂಬಾ ಎತರದಲ್ಲಿ ಸಾಮಾನ್ಯರಿಂದ ಬಿನ್ನರಾಗಿ ಅಸಾಮಾನ್ಯ ವ್ಯಕ್ತಿತ್ವವನ್ನು ಹೊಂದಿರುವ ಆದರ್ಶಮಾನವರಾಗಿ ಕಂಡುಬರುತ್ತಾರೆ.

ಪ್ರಪ್ರಥಮಬಾರಿಗೆ ಬಸವಕಲ್ಯಾಣದಲ್ಲಿ ಪ್ರಜಾಪ್ರಭುತ್ವ ವ್ಯವಸ್ಥೆಯ ಮಾದರಿಯಲ್ಲಿ 'ಅನಭವ ಮಂಟಪ'ವನ್ನು ಕಟ್ಟಿದ ಕೀರ್ತಿ ಬಸವಣ್ಣನವರದು. ಭೇದ ಸಂಸ್ಕೃತಿಯನ್ನು ಅಳಿಸಿಹಾಕಿ ಸರ್ವಸಮಾನತೆಯ ತಳಹದಿಯ ಮೇಲೆ ಸಮಾಜ ನಿರ್ಮಿಸಲು ಹೊರಟ ಘನವ್ಯಕ್ತಿತ್ವ ಬಸವಣ್ಣನವರದು. ಅಂದು ಅವರು ಸೂಚಿಸಿದ ಸಪ್ತಸೂತ್ರಗಳನ್ನು ಒಳಗೊಂಡಿರುವ ಅವರ ವಚನವನ್ನು ಮೆಲುಕು ಹಾಕಿದಾಗ

ಕಳಬೇಡ ಕೊಲಬೇಡ ಹುಸಿಯ ನುಡಿಯಲುಬೇಡ
ಮುನಿಯಬೇಡ, ಅನ್ಯರಿಗೆ ಅಸಹ್ಯಪಡಬೇಡ
ತನ್ನ ಬಣ್ಣಿಸಬೇಡ, ಇದಿರು ಹಳಿಯಲು ಬೇಡ
ಇದೇ ಅಂತರಂಗ ಶುದ್ಧಿ! ಇದೇ ಬಹಿರಂಗ ಶುದ್ಧಿ!
ಇದೇ ನಮ್ಮ ಕೂಡಲಸಂಗಮದೇವನೊಲಿಸುವ ಪರಿ

ಪ್ರಸ್ತುತ ವಚನದಲ್ಲಿ ಕಂಡುಬರುವ ವಿಚಾರಗಳನ್ನು ಗಮನಿಸಿದಾಗ ಅವುಗಳನ್ನು ನಮ್ಮ ಬದುಕಿನಲ್ಲಿ ಅಳವಡಿಸಿಕೊಂಡರೆ ಸಾಮಾಜಿಕವಾಗಿ, ರಾಜಕೀಯವಾಗಿ, ಧಾರ್ಮಿಕವಾಗಿ ಆರೋಗ್ಯಯುತವಾದ ವ್ಯಕ್ತಿತ್ವವನ್ನು ನಿರ್ಮಾಣ ಮಾಡುವುದರೊಂದಿಗೆ ಸ್ವಾಸ್ಥ್ಯಪೂರ್ಣವಾದ ಸಮಾಜವನ್ನು ಕಟ್ಟಬಹುದು. ಇಂತಹ ಅದ್ಭುತ ವಿಚಾರಗಳನ್ನು ನಾಲ್ಕೈದು ಸಾಲಿನ ವಚನದಲ್ಲಿ ಅಂದು ಸುಮಾರು ಒಂಭತ್ತುನೂರು ವರ್ಷಗಳ ಹಿಂದೆ ಬಸವಣ್ಣನವರು ಉಲ್ಲೇಖಿಸಿದ್ದು ಇಂದಿಗೂ ನಮ್ಮನ್ನು ಬೆರಗುಗೊಳ್ಳುವಂತೆ ಮಾಡುತ್ತಿದೆ. ಇದಕ್ಕೆ ಕಾರಣ ಅವರ ನಡೆ-ನುಡಿ ಒಂದಾಗಿದ್ದು ಕಂಡುಬರುತ್ತದೆ.

ಬಸವಣ್ಣನ ಸಮಕಾಲೀನರಾಗಿ ಕಂಡುಬರುವ ಅಲ್ಲಮಪ್ರಭು ಅನುಪಮ ಜ್ಞಾನಿ, ಅನುಭವ ಮಂಟಪದ ಅದ್ವಿತೀಯ ಅಧ್ಯಕ್ಷ, ಬೆಡಗಿನ ವಚನಗಳ ರಚನಕಾರನಾಗಿ ಖ್ಯಾತನಾಗಿದ್ದಾನೆ. ವಚನ ಪರಂಪರೆಗೆ ಬಸವಣ್ಣ ಭಕ್ತಿಯ ಹೊದಿಕೆಯನ್ನು ಹೊದಿಸಿದರೆ ಅಲ್ಲಮ ಜ್ಞಾನದ ತಳಹದಿಯನ್ನು ಅಳವಡಿಸಿದ. ಅಲ್ಲಮನ ಸುಮಾರು 1294 ವಚನಗಳು ಕಂಡುಬರುವುದು 'ಅಲ್ಲಮನ ವಚನ ಚಂದ್ರಿಕೆ' ಎಂಬ ಹೊತ್ತಿಗೆಯಲ್ಲಿ. ಶಿವಮೊಗ್ಗ ಶಿಕಾರಿಪುರ ಈತನ ಹುಟ್ಟೂರು. ಪ್ರಭುವಿನ ವಚನಗಳು 'ಗುಹೇಶ್ವರ' ಅಂಕಿತನಾಮದಿಂದ ಕೊನೆಗೊಳ್ಳುತ್ತವೆ. ಈತನ ಬೆಡಗಿನ ವಚನಗಳು ಜನಸಾಮಾನ್ಯರಿಗೆ ಅರ್ಥವಾಗುವುದು ಕಷ್ಟ. ಸಾತ್ವಿಕ ಮನಸ್ಸಿನ ವ್ಯಕ್ತಿಯಾದ ಅಲ್ಲಮನ ವಚನಗಳಲ್ಲಿ ಮೌಲಿಕವಾದ ವಿಚಾರಗಳು ಕಂಡುಬರುತ್ತವೆ.

ಹೊನ್ನು ಮಾಯೆಯೆಂಬರು ಹೊನ್ನು ಮಾಯೆಯಲ್ಲ
ಹೆಣ್ಣು ಮಾಯೆಯೆಂಬರು ಹೆಣ್ಣು ಮಾಯೆಯಲ್ಲ
ಮಣ್ಣು ಮಾಯೆಯೆಂಬರು ಮಣ್ಣು ಮಾಯೆಯಲ್ಲ
ಮನದ ಮುಂದಣ ಆಶೆಯೇ ಮಾಯೆ ಕಾಣಾ ಗುಹೇಶ್ವರ.

ಪ್ರಸ್ತುತ ಬದುಕಿನಲ್ಲಿ ಹೆಣ್ಣಿಗಾಗಿ, ಮಣ್ಣಿಗಾಗಿ, ಹೊನ್ನಿಗಾಗಿ ಆಶೆಪಟ್ಟು ಅವುಗಳನ್ನು ಪಡೆಯಲು ಯಾವುದಕ್ಕೂ ಹೇಸದ ಜನರನ್ನು ಕಂಡಾಗ ಶರಣರು ನಮಗೆ ದ್ರಷ್ಟಾರರಾಗಿ ಕಂಡುಬರುವುದು ಅವರ ವಾಸ್ತವಿಕ ವಿಚಾರಗಳಿಂದ ಎಂಬ ಸತ್ಯ ನಮ್ಮನ್ನು ಇಂದಿಗೂ ಎಚ್ಚರಿಸುತ್ತದೆ. ಶರಣರು ಇಂತಹ ಚಿಂತನೆಗಳ ಒಡೆಯರಾಗಲು ಕಾರಣ ಅವರಲಿನ ಜೀವನ ಬದತೆ

ಹಾಗೂ ಅಂತರಂಗ-ಬಹಿರಂಗದ ಬದುಕಿನಲ್ಲಿ ಪರಿಶುದ್ಧವಾಗಿರುವುದೇ ಆಗಿದೆ.

ಕಂಡು ಕಂಡುದನೆಲ್ಲವ ಕೊಂಡು
ಅಟ್ಟಹಾಸದಿ ಮೆರೆವ ಜನಕೆ
ಕಾಣದ ಜೀವಿಯು ಬಂದು
ತಲ್ಲಣಿಸುವುದು ಜಗವು ನೋಡಾ ಗುಹೇಶ್ವರ.

ಇಂದು ಜಗತ್ತಿನಲ್ಲಿ ಘಟಿಸುತ್ತಿರುವ ವಿದ್ಯಮಾನಗಳನ್ನು ಅವಲೋಕನ ಮಾಡಿದಾಗ ಮನುಷ್ಯನ ದುರಾಶೆ, ಮೋಸತನ, ಕಪಟತನ, ಲೋಭಿತನ ಎಲ್ಲವೂ ನನ್ನದಾಗಬೇಕೆಂಬ ಕೆಟ್ಟಹಟ ಇದಕ್ಕೆ ಸಾಕ್ಷಿಯಾಗಿ ನಿಲ್ಲುತ್ತವೆ. ಇವೆಲ್ಲವೂ ಪ್ರಚಲಿತ ಜೀವನಶೈಲಿಯನ್ನು ಕುರಿತು ಚಿಂತನೆ ಮಾಡುವಂತೆ ಮಾಡುತ್ತದೆ. ಮಾನವನ ಭೋಗಸಂಸ್ಕೃತಿಯ ವಿಲಾಸಿ ಬದುಕಿನ ಪರಿಣಾಮವಾಗಿ ಇಂದು ಜಗತ್ತನ್ನೇ ಕಾಡುತ್ತಿರುವ ಕೊರೊನಾ ಮಹಾಮಾರಿಯನ್ನು ಅಲ್ಲಮನ ಪ್ರಕೃತ ವಚನ ಅಕ್ಷರಶಃ ನೆನಪಿಸುತ್ತದೆ. ಇದರಿಂದ ಆತನ ದೂರದರ್ಶಿತ್ವ ನಮ್ಮ ವಿವೇಕದ ಕಣ್ಣು ತೆರೆಸುತ್ತದೆ.

ವಚನ ಸಾಹಿತ್ಯದ ಆಕಾಶದಲ್ಲಿ ಬೆಳಗುವ ಉಜ್ವಲ ನಕ್ಷತ್ರ, ಆದರ್ಶ ಬದುಕಿನ ಪ್ರತೀಕವಾಗಿ ಜೀವಿಸಿದ ವೀರಾಗಿಣಿಯೆ ಅಕ್ಕಮಹಾದೇವಿ. ಕನ್ನಡದ ಮೊದಲ ವಚನಗಾರ್ತಿ ಅಕ್ಕನ ವಚನಗಳಲ್ಲಿ ಅಂದಿನ ಸಮಾಜವನ್ನು ಕಠೋರವಾಗಿ ಟೀಕಿಸುವ ಹರಿತವಾದ ಚಿಂತನ-ಮಂಥನ ಕಂಡು ಬರುತ್ತದೆ. ಮೊದಲ ವಚನಗಾರ್ತಿಯಾಗಿ ಗಮನಸೆಳೆಯುವ ಅಕ್ಕ ಕನ್ನಡ ಸಾಹಿತ್ಯದ ದೃಷ್ಟಿಯಿಂದ 'ಯೋಗಾಂಗ ತ್ರಿವಿದಿ' ಕೃತಿಯನ್ನು ಎಲ್ಲರಿಗಿಂತ ಮೊದಲು ತ್ರಿಪದಿಯಲ್ಲಿ ರಚಿಸಿದ ಅಕ್ಕ ತಾನು ಕೇವಲ ವಚನಗಾರ್ತಿಯಲ್ಲ, ಕವಯಿತ್ರಿ ಎಂಬುದನ್ನೂ ನಿರೂಪಿಸುತ್ತಾಳೆ. ಅಕ್ಕನ ಹುಟ್ಟೂರು ಶಿವಮೊಗ್ಗ ಜಿಲ್ಲೆಯ ಶಿಕಾರಿಪುರ ತಾಲೂಕಿನ ಉಡುತಡಿ ಗ್ರಾಮ. ತಂದೆ: ಓಂಕಾರಶೆಟ್ಟಿ ಹಾಗೂ ತಾಯಿ: ಲಿಂಗಮ್ಮ ದಂಪತಿಗಳ ಸುಪುತ್ರಿಯೆ ಅಕ್ಕಮಹಾದೇವಿ. ಬನವಾಸಿಯ ಮಾಂಡಲಿಕ ಅರಸ ಕಸಪಯ್ಯಾ(ಕೌಶಿಕ)ನನ್ನು ಅವನ ಒತ್ತಡಕ್ಕೆ ಮಣಿದು ವಿವಾಹವಾಗುತ್ತಾಳೆ. ಆತ ಆಕೆಯ ಕರಾರಿನಂತೆ ನಡೆಯದೆ ಹೋದಾಗ ಅಕ್ಕ ಆತನ ಮನೆಯಿಂದ ದಿಗಂಬರೆಯಾಗಿ ಹೊರಟು ಬಿಡುತ್ತಾಳೆ. ಕಲ್ಯಾಣದ ಅನುಭವ ಮಂಟಪವನ್ನು ಪ್ರವೇಶಿಸುವ ಮುನ್ನ ಪ್ರಖಾಂಡ ಜ್ಞಾನಿ ಅಲ್ಲಮಪ್ರಭುವಿನ ಪ್ರಶ್ನೆಗಳಿಗೆ ಸಮರ್ಥವಾಗಿ ಎದುರಿಸಿ(ಉತ್ತರಿಸಿ) ತಾನೊಬ್ಬ ಅನುಭಾವಿಯೆಂಬುದನ್ನು ದೃಢೀಕರಿಸುತ್ತಾಳೆ. ಈ ಸಂದರ್ಭದಲ್ಲಿ ಅಕ್ಕನ ಅನುಭಾವ ಜ್ಞಾನದ ಆಳವನ್ನು ಗುರುತಿಸಿದ ಚೆನ್ನಬಸವಣ್ಣ ಅಕ್ಕನನ್ನು ಕೊಂಡಾಡಿದ್ದು ಹೀಗೆ, "ಆದ್ಯರ ಅರವತ್ತು ವಚನಕ್ಕೆ ಬಸವಣ್ಣನ ಇಪ್ಪತ್ತು ವಚನ, ಬಸವಣ್ಣನ ಇಪ್ಪತ್ತು ವಚನಕ್ಕೆ ಅಲ್ಲಮಪ್ರಭುವಿನ ಹತ್ತು ವಚನ, ಅಲ್ಲಮಪ್ರಭುವಿನ ಹತ್ತು ವಚನಕ್ಕೆ ಅಜಗಣ್ಣನ ಐದು ವಚನ. ಅಜಗಣ್ಣನ ಐದು ವಚನಕ್ಕೆ ಅಕ್ಕಮಹಾದೇವಿಯ ಒಂದು ವಚನ ಸಮ" ಎಂದು ಹೇಳುತ್ತಾನೆ. ಇದು ಅಕ್ಕನ ವ್ಯಕ್ತಿತ್ವದ ಉನ್ನತಿಕೆಯನ್ನು ತೋರ್ಪಡಿಸುತ್ತದೆ. ಇದರಿಂದ ಅಕ್ಕ ಸ್ತ್ರೀಕುಲಕ್ಕೆ ಆದರ್ಶ ಹೆಣ್ಣಾಗಿ ಕಂಡುಬರುತ್ತಾಳೆ. ಅಕ್ಕಮಹಾದೇವಿ ಅಂದು ಮಾಡಿದ ಪ್ರತಿಭಟನೆಗಳನ್ನು ಇಂದಿಗೂ ಜೀವಂತವಾಗಿ ಇರುವುದನ್ನು ಕಾಣುತ್ತೇವೆ. ಸ್ತ್ರೀಯರ ಮೇಲಿನ ಪುರುಷ ಪ್ರಧಾನ ಸಮಾಜದ ದೌರ್ಜನ್ಯವನ್ನು ಆಕೆ ಪ್ರತಿಭಟಿಸುವುದು ಹೀಗೆ.

ಸಾವಿಲ್ಲದ ಕೇಡಿಲ್ಲದ ರೂಹಿಲ್ಲದ ಚೆಲುವಂಗೆ
ನಾನೊಲಿದೆ
ಎಡೆಯಿಲ್ಲದ ಕಡೆಯಿಲ್ಲದ ತೆರಹಿಲ್ಲದ ಕುರುಹಿಲ್ಲದ
ಚೆಲುವಂಗೆ ನಾನೊಲಿದೆ ಎಲೆ ಅವ್ವಗಳಿರಾ?

ಈ ಕಾಲದ ಶ್ರೇಷ್ಠ ವಚನಕಾರರ ಸಾಲಿಗೆ ಸೇರುವ ಮತ್ತೊಬ್ಬ ವಚನಕಾರನೆಂದರೆ ಚೆನ್ನಬಸವಣ್ಣ. ಈತ ಬಸವಣ್ಣನ ಸೋದರಳಿಯ. ಬಸವಣ್ಣನ ಅಕ್ಕ ನಾಗಮ್ಮನ ಮಗ. ಹಿರಿಯ ಶರಣ ಸೊನ್ನಲಿಗೆ ಸಿದ್ಧರಾಮನಿಗೆ ದೀಕ್ಷೆಯನ್ನು ನೀಡಿದ ಹಿರಿಮೆ ಈತನದು. ಚನ್ನಬಸವಣ್ಣ ಬದುಕಿದ್ದು ಕೇವಲ 24 ವರ್ಷ ಮಾತ್ರ. ಇಷ್ಟು ಕಡಿಮೆ ಆಯುಷ್ಯದಲ್ಲಿ ಹಿರಿದಾದ ಸಾಧನೆಯನ್ನು ಮಾಡಿದ ಪ್ರತೀತಿ ಹಾಗೂ ಅನುಭವ ಮಂಟಪದ, ಶೂನ್ಯ ಸಿಂಹಾಸನದ ಎರಡನೆಯ ಅಧ್ಯಕ್ಷನಾದದ್ದು ಈತನ ವಿಶೇಷ ಸಾಧನೆ. ಬಸವಣ್ಣನ ಸೋದರಳಿಯನಾಗಿದ್ದರೂ ಆತ ನಮ್ಮ ಗಮನವನ್ನು ಆಕರ್ಷಿಸುವುದು ತನ್ನ ಪಾಂಡಿತ್ಯ, ಸಾಧನೆ ಹಾಗೂ ಸ್ವಸಾಮರ್ಥ್ಯದಿಂದ. ಸುಮಾರು 1500 ಕ್ಕೂ ಹೆಚ್ಚು ವಚನಗಳನ್ನು ರಚಿಸಿದ ಹೆಗ್ಗಳಿಕೆ ಚನ್ನಬಸವಣ್ಣನದು. ವಚನ ರಚನೆ ಅಷ್ಟೇ ಅಲ್ಲದೆ ಅಷ್ಟಾವರಣ, ಪಂಚಾಚಾರ, ಷಟ್ಸ್ಥಲಗಳನ್ನು ರಚಿಸಿದವನು ಚನ್ನಬಸವಣ್ಣ. ಕಲ್ಯಾಣಕ್ರಾಂತಿಯ ನಂತರ ಉಳವಿ ಈತನ ಕಾರ್ಯಕ್ಷೇತ್ರವಾಯಿತು. ಅಲ್ಲದೆ ವಚನಸಾಹಿತ್ಯವನ್ನು ರಕ್ಷಣೆ ಮಾಡಿದವನು ಚನ್ನಬಸವಣ್ಣನೆ. ಸುಮಾರು ಹನ್ನೆರಡು ಸಾವಿರ ಶರಣರೊಂದಿಗೆ ವಚನ ಸಾಹಿತ್ಯವನ್ನು ರಕ್ಷಿಸಿದ ಹಿರಿಮೆ ಶರಣ ಚನ್ನಬಸವಣ್ಣನವರದ್ದು.

ಶರಣರ ಜೀವನದಲ್ಲಿ ನೇಮ-ನಿಷ್ಠೆಗಳು, ಗೌರವ-ಭಕ್ತಿ, ಸಂಸ್ಕಾರ, ಸಮಸಮಾಜದ ತುಡಿತ ಹಾಸುಹೊಕ್ಕಾಗಿದ್ದವು. ಶರಣಧರ್ಮ ಸರ್ವರನ್ನೂ ಸಮಾನತೆಯಿಂದ ಕಾಣುವ ಧರ್ಮವಾಗಿತ್ತು. ಚನ್ನಬಸವಣ್ಣನ ವಯಸ್ಸು ಕಿರಿದಾಗಿದ್ದರೂ ಪಾಂಡಿತ್ಯ ತುಂಬಾ ಹಿರಿದಾಗಿತ್ತು. ಈ ಎಲ್ಲ ಅಂಶಗಳನ್ನು ಪ್ರತಿಪಾದಿಸುವ ಚನ್ನಬಸವಣ್ಣನ ವಚನವೊಂದು ಅವರಿಗಿದ್ದ ತತ್ವನಿಷ್ಠೆಯಡೆ ನಮ್ಮನ್ನು ಸೆಳೆಯುತ್ತದೆ.

ನಿಷ್ಠೆಯುಳ್ಳಾತಂಗೆ ನಿತ್ಯ ನೇಮದ ಹಂಗೇಕೆ
ಸತ್ಯವುಳ್ಳಾತಂಗೆ ತತ್ವ ವಿಚಾರದ ಹಂಗೇಕೆ
ಅರಿವುಳ್ಳಾತಂಗೆ ಅಗ್ಘವಣಿಯ ಹಂಗೇಕೆ
ಮನಶುದ್ಧವುಳ್ಳವಂಗೆ ಮಂತ್ರದ ಹಂಗೇಕೆ
ಭಾವಶುದ್ಧವುಳ್ಳವಂಗೆ ಹೂವಿನ ಹಂಗೇಕೆ
ಕೂಡಲಚೆನ್ನಸಂಗಯ್ಯಾ ನಿಮ್ಮನರಿದಾತಂಗೆ ನಿಮ್ಮ
ಹಂಗೇಕೆ

ಒಳ್ಳೆಯ ನಡೆನುಡಿವುಳ್ಳವರಿಗೆ, ಸತ್ಯವಂತರಿಗೆ, ಮನಶುದ್ಧವುಳ್ಳವರಿಗೆ, ಭಾವಶುದ್ಧವುಳ್ಳವರಿಗೆ ನಿತ್ಯ ನೇಮದ ಹಾಗೂ ಮಂತ್ರದ ಹಂಗಿನ ಅವಶ್ಯಕತೆಯಿಲ್ಲ ಎನ್ನುವುದನ್ನು ಈ ವಚನ ಧ್ವನಿಪೂರ್ಣವಾಗಿ ಸೂಚಿಸುತ್ತದೆ. 'ಆಚಾರವೇ ಜಂಗಮ, ವಿಚಾರವೇ ಭಕ್ತ' ಆಚಾರ-ವಿಚಾರಗಳೆರಡರ ಸಂಗಮವೇ ಜ್ಞಾನಿಯ ಬದುಕು. 'ಪರಸತಿಯ ಭೋಗಿಸಬಾರದೆಂಬುದು ಜ್ಞಾನ, ಅದನ್ನು ಅರ್ಥೈಸಿಕೊಂಡು ಆಚರಣೆಯಲ್ಲಿ ತರುವುದು ಕ್ರಿಯಾಜ್ಞಾನ' ಇಂತಹ ಸಾಕಷ್ಟು ಮೌಲಿಕ ವಿಚಾರಗಳು ಇಂದಿಗೂ ಪ್ರಸುತವಾಗುತ್ತಿರುವುದು ಚನ್ನಬಸವಣ್ಣನವರ ವಿದ್ವತ್ ವ್ಯಕ್ತಿತ್ವಕ್ಕೆ ಕನ್ನಡಿಯನ್ನು ಹಿಡಿಯುತ್ತದೆ.

ಹನ್ನೆರಡನೆಯ ಶತಮಾನದ ಶರಣ ಚಳುವಳಿಯಲ್ಲಿ ಕೇಳಿ ಬರುವ ಇನ್ನೊಂದು ಪ್ರಮುಖ ಹೆಸರೆಂದರೆ ಶರಣ ಸೊನ್ನಲಿಗೆ

ಸಿದ್ಧರಾಮನದು. ಆ ಕಾಲದ ಕಾಯಕ ತತ್ವದ ಪ್ರತಿನಿಧಿಯಾಗಿ ಸಿದ್ಧರಾಮ ನಿಲ್ಲುತ್ತಾನೆ. ಇಲ್ಲಿಯವರೆಗೆ ಈತನು ರಚಿಸಿದ ಸುಮಾರು 1378 ವಚನಗಳು ದೊರೆತಿವೆ. ಈತನ ವಚನಗಳ ಅಂಕಿತನಾಮ 'ಕಪಿಲಸಿದ್ಧಮಲ್ಲಿಕಾರ್ಜುನ'. ಜಿ.ಎಸ್.ಶಿವರುದ್ರಪ್ಪನವರ ದೃಷ್ಟಿಯಲ್ಲಿ ಸಿದ್ಧರಾಮ ಒಬ್ಬ ಕರ್ಮಯೋಗಿ. ಈತನ ಕರ್ಮಭೂಮಿ ಸೊನ್ನಲಿಗೆ (ಇಂದಿನ ಮಹಾರಾಷ್ಟ್ರ ರಾಜ್ಯದ ಸೊಲ್ಲಾಪುರ). ಧೂಳಿಮಾಕಾಳ ಎಂಬ ಸ್ಥಳೀಯ ದೈವದ ಭಕ್ತರಾಗಿದ್ದ ಮೊರಡಿಯ ಮುದ್ದ ಮತ್ತು ಸುಗ್ಗಲೆಯೆಂಬ ಗೌಡ ದಂಪತಿಗಳ ಉದರದಲ್ಲಿ ಜನಿಸಿದ ಶಿಶುವೇ ಸಿದ್ಧರಾಮ. ಪೂರ್ವಾಶ್ರಮದ ಹೆಸರು ಧೂಳಿಮಾಕಾಳ.

ಚನ್ನಬಸವಣ್ಣನಿಂದ ಶರಣ ದೀಕ್ಷೆಯನ್ನು ಪಡೆದ ಸಿದ್ಧರಾಮ ಅಲ್ಲಮನಿಂದ ಶರಣ ಶಿಷ್ಟಾಚಾರವನ್ನು ಅರಿತು ಅದರಲ್ಲಿ ತನ್ನನ್ನು ಸ್ವಯಂಪೂರ್ಣವಾಗಿ ತೊಡಗಿಸಿಕೊಂಡು ಬಸವಣ್ಣನಂತೆ ವೀರಶೈವಧರ್ಮಕ್ಕೆ ಆಧಾರಸ್ತಂಭವಾಗಿ ನಿಂತನೆಂಬುದು ವಿಶೇಷ. ಶರಣರ ಸಲಹೆಯಂತೆ ಆತ ಊರಲ್ಲೆ ನೆಲೆನಿಂತ. ಭೋಗಭೂಮಿಯಲ್ಲಿ ಕಂಡುಕೊಳ್ಳದ ಸಿದ್ಧಿಯನ್ನು ಕರ್ಮಭೂಮಿಯಲ್ಲಿ ಕಂಡುಕೊಳ್ಳಲು ಸಾಧ್ಯವೆಂಬುದನ್ನು ಸಾಧಿಸಿ ತೋರಿಸಿದವನು ಸೊನ್ನಲಿಗೆ ಸಿದ್ಧರಾಮ. ಇವನ ವಿಶೇಷವಾದ ಸಾಧನೆಯೆಂದರೆ 'ಮನೆಗೆದ್ದು ಮಾರು ಗೆಲ್ಲು' ಎಂಬ ಲೋಕವಾಣಿಯಂತೆ ತನ್ನ ಗ್ರಾಮದಲ್ಲಿ ದೇವಾಲಯವೊಂದನ್ನು ಕಟ್ಟಿಸಿ ದೀನ-ದಲಿತರ ಉದ್ಧಾರಕ್ಕಾಗಿ ಮುಂದಾದ. ಇದಷ್ಟೇ ಅಲ್ಲದೆ ತನ್ನ ನಾಲ್ಕು ಸಾವಿರ ಶಿಷ್ಯರಿಂದ ದೊಡ್ಡಕೆರೆಯನ್ನು ಕಟ್ಟಿಸಿದ. ಹೀಗೆ ತನ್ನವರ ಉದ್ಧಾರಕ್ಕಾಗಿ ಕಾಯಕ ಸಿದ್ಧಾಂತವನ್ನು ಸಮರ್ಪಕವಾಗಿ ಬಳಸಿದ. ತಾನೊಬ್ಬ ಯೋಗಿ ಎಂಬುದನ್ನು ನಿರೂಪಿಸಲು ಹೊರಟ ಸಿದ್ಧರಾಮ ತನ್ನೊಂದು ವಚನದಲ್ಲಿ ವ್ಯಕ್ತಿಯನ್ನು ಆತನಲ್ಲಿರುವ ಜ್ಞಾನ, ಪಾಂಡಿತ್ಯಗಳಿಂದ ಅಳೆಯಬೇಕೆಂಬುದು ಇಂದಿಗೂ ಸಲ್ಲುವ ವಿಚಾರ.

ಭಕ್ತನಾದೊಡೆ ಬಸವಣ್ಣನಂತಾಗಬೇಕು
ಜಂಗಮನಾದೊಡೆ ಪ್ರಭುವಿನಂತಾಗಬೇಕು
ಭೋಗಿಯಾದೊಡೆ ಚನ್ನಬಸವಣ್ಣನಂತಾಗಬೇಕು
ಯೋಗಿಯಾದೊಡೆ ನನ್ನಂತಾಗಬೇಕು
ನೋಡಯ್ಯಾ ಕಪಿಲಸಿದ್ಧಮಲ್ಲಿಕಾರ್ಜುನ

ಸಮಾರೋಪ

ಹನ್ನೆರಡನೆಯ ಶತಮಾನದಲ್ಲಿ ಹಲವಾರು ಶರಣರು ಜೀವಿಸಿದ್ದು ಮಾನವರೆಲ್ಲರೂ ಒಂದೆಂಬ ಭಾವನೆ ಅವರದಾಗಿತ್ತು. ಸರ್ವರನ್ನು ಸರ್ವಸಮಾನತೆಯ ನೆಲೆಯಲ್ಲಿ ಶರಣಪರಂಪರೆ ನಡೆಸಿಕೊಂಡಿತು. ಶರಣರಲ್ಲಿ ಧಾರ್ಮಿಕ ಶ್ರೀಮಂತಿಕೆ, ಸಾಮಾನ್ಯ ಜ್ಞಾನ, ವಿದ್ವತ್ತು, ಹೃದಯಶ್ರೀಮಂತಿಕೆ, ಅನುಭಾವಗಳ ಸಂಗಮವೇ ಶರಣರ ಬದುಕಾಗಿತ್ತು. ಇದು ನಾಡಿನ ಆಧ್ಯಾತ್ಮಿಕ, ಸಾಮಾಜಿಕ ಜನಜೀವನದಲ್ಲೊಂದು ಸಂಕ್ರಮಣಕಾಲವಾಗಿ ಪರಿಣಮಿಸಿತು. ಜಡ್ಡುಗಟ್ಟಿದ ಆಚರಣೆ, ಸಂಪ್ರದಾಯ ತುಂಬಿಕೊಂಡಿರುವ ಸಮಾಜದಲ್ಲಿ ಶರಣರ ಆಗಮನವಾಗಿ ಪರಿವರ್ತನೆ ಕಂಡುಬಂದಿತು. ಸಮಾಜದಲ್ಲಿ ಕಾಯಕದ ಮಹತ್ವವನ್ನು, ವ್ಯಕ್ತಿಗೌರವವನ್ನು ಹೆಚ್ಚಿಸುವ ಹಾಗೂ ಸಾಮಾಜಿಕ ಕ್ರಾಂತಿಯ ಕಾಲವಾಗಿ ತನ್ನದೇ ಕೊಡುಗೆಯನ್ನು ನೀಡಿತು. ಇಂದಿನ ಜನಜೀವನದಲ್ಲಿ ಕಂಡುಬರುವ ಸ್ವಾರ್ಥ, ಹಪಹಪಿತನ, ಕಪಟತನ, ಮೋಸಗಳನ್ನು ತೊಲಗಿಸಲು ಶರಣರ ವಚನಗಳೆಂಬ 'ಉಪನಿಷತ್ತು'ಗಳಲ್ಲಿರುವ ಆದರ್ಶ ವಿಚಾರಧಾರೆಗಳನ್ನು ಅಳವಡಿಸಿಕೊಂಡು ಬಾಳಿದರೆ ಶರಣರ ತತಗಳು ಇಂದಿಗೂ ಪ್ರಸ್ತುತ.

:ಪರಾಮರ್ಶನ ಗ್ರಂಥಗಳು

1. .'ಕರ್ಮಯೋಗಿ' – ಜಿ.ಎಸ್.ಶಿವರುದ್ರಪ್ಪ.
2. 'ಕನ್ನಡ ಸಾಹಿತ್ಯ ಚರಿತ್ರೆ' – ರಂ.ಶ್ರೀ. ಮುಗಳಿ.
3. 'ವಚನ ಸಾಹಿತ್ಯ – ಎಂ.ಚಿದಾನಂದ ಮೂರ್ತಿ
4. 'ವಚನ ಸಾಹಿತ್ಯ ಸಮೀಕ್ಷೆ' – ವಿ.ಜಿ.ಪೂಜಾರ.
5. 'ವಚನ ಸಂಸ್ಕೃತಿ' – ಬಸವರಾಜ ಸಬರದ.
6. 'ಶಾಸನಗಳಲ್ಲಿ ಶಿವಶರಣರು' – ಎಂ. ಎಂ. ಕಲ್ಬುರ್ಗಿ.

M.G.V.C. Arts, Commerce & Science College MUDDEBIHAL -586212 Dt: Vijayapur





# International Journal of Kannada Research
www.kannadajournal.com

Peer Reviewed Journal, Refereed Journal, Indexed Journal

ISSN: 2454-5813, Impact Factor: RJIF 4.89


## *Publication Certificate*

This certificate confirms that "ಪ್ರೊ, ವಿ.ಎಸ್.ಲಮಾಣಿ" has published manuscript titled "ಪ್ರಸ್ತುತ ಜನಜೀವನದಲ್ಲಿ ಶರಣರ ಚಿಂತನೆಯ ವಾಸ್ತವಿಕತೆ".

Details of Published Article as follow:

| | | |
|---|---|---|
| Volume | : | **6** |
| Issue | : | **2** |
| Year | : | **2020** |
| Page Number | : | **70-73** |

Certificate No.: **6-2-4**
Date: **01-04-2020**

Yours Sincerely,

Akhil Gupta

Director


Akhil Gupta
Publisher
International Journal of Kannada Research
www.kannadajournal.com
Tel: +91-9711224068


Co-ordinator,
Internal Quality Assurance Cell
M.G.V.C. Arts, Commerce & Science College
MUDDEBIHAL-586212. Dist: Vijayapur.

PRINCIPAL,
M. G. V. C. Arts, Com. & Science College
MUDDEBIHAL - 586212